ಅಸಲು ದಾವಾ ನಂಃ 8/2019
ಡಿ ಡಬ್ಲ್ಯುಃ1

<u>ದಿನಾಂಕಃ **26-09-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ವಿ ಆರ್ ಎನ್ ವಕೀಲರಿಂದಃ</u>

ದಾವಾ ಸ್ವತ್ತುಗಳು ನಮ್ಮ ಮತ್ತು ವಾದಿಯ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ಕಾಡಮ್ಮ ಹೆಗ್ಗಡತಿ ಇವರು ಮಗಳು ವನಜಾಕ್ಷಿ ದಿನಾಂಕ 14.06.1996 ರಲ್ಲಿ ವಿಲ್ ಅನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿ. ಮಂಜುನಾಥ್ ಇವರು ಕಾಡಮ್ಮ ಹೆಗ್ಗಡತಿ ಇಂದ ಒಂದು ವಿಲ್ ಅನ್ನು ಬರೆಸಿಕೊಂಡಿದ್ದರು ಎಂದರೆ ಸರಿ. ದಾವಾ ಸ್ವತ್ತು 5 ನ್ನು ಹೊರತು ಪಡಿಸಿ ಉಳಿದ ಆಸ್ತಿಗಳು ಪುಟ್ಟಮ್ಮ ಹೆಗ್ಗಡತಿ ಇವರ ಆಸ್ತಿಗಳು ಇರುತ್ತವೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಕಾಡಮ್ಮ ಹೆಗ್ಗಡತಿ ಪೂರ್ವದಲ್ಲ್ ಪುಟ್ಟಮ್ಮ ಹೆಗ್ಗಡತಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

2. ಈ ದಾವೆ ಸಲ್ಲಿಸಿದ ನಂತರ ಪ್ರತಿವಾದಿ 8 ರವರು ದಾವಾ ಸ್ವತ್ತು 1 ರಿಂದ 3 ನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವನಜಾಕ್ಷಿ ಇವರು ಪ್ರತಿವಾದಿ 8 ರವರಿಗೆ ಸದರಿ ಆಸ್ತಿಗಳನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು 3 ರಲ್ಲಿ 33 ಗುಂಟೆ ತರಿ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನ ಪೈಕಿ 5 ಗುಂಟೆ ಜಾಗದಲ್ಲಿ ಸಾವಿತ್ರಮ್ಮ ಇವರು ಅಂಗಡಿ ಮನೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಕೇವಲ 28 ಗುಂಟೆ ಜಮೀನಾಗಿ ನಮೂದು ಇರುತ್ತದೆ ಎಂದರೆ ಸರಿ. ಸುಮಾರು 20-30 ವರ್ಷಗಳಿಂದ ಶಂಕ್ರಪ್ಪ ಮತ್ತು ಸಾವಿತ್ರಮ್ಮ ಇವರ ಸ್ವಾಧೀನದಲ್ಲಿ 5 ಗುಂಟೆ ಜಾಗ ಇರುತ್ತದೆ ಎಂದರೆ ಸರಿ. ನಿಪಿ- 45 ರಲ್ಲಿ ಕಾಣುವ ಭಾವಚಿತ್ರದಲ್ಲಿ 5 ಗುಂಟೆ ಜಾಗದಲ್ಲಿರುವ ಮನೆ ಇರುತ್ತದೆ ಎಂದರೆ ಸರಿ. 8 ನೇ ಪ್ರತಿವಾದಿ ಈಗ ಎನ್ ಆರ್ ಪುರದಲ್ಲಿ ವಾಸ ಇರುತ್ತಾರೆ. ಸದರಿ ಮನೆಯಲ್ಲಿ ಈಗ 9 ನೇ ಪ್ರತಿವಾದಿ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಮನೆಯ ಉತ್ತರಕ್ಕೆ ತಿರುಗಾಡು ರಸ್ತೆ ಇರುತ್ತದೆ. ಪೂರ್ವದಲ್ಲಿ ಹಮೀನ್ ಸಾಬ್ ಇವರ ಜಮೀನು, ಪಶ್ಚಿಮದಲ್ಲಿ ಸೂರ ನಾಯ್ಕ ಇವರ ಮನೆ, ದಕ್ಷಿಣಕ್ಕೆ ಅಬ್ದುಲ್ ರೆಹಮಾನ್ ಇವರ ಜಮೀನು ಇರುತ್ತದೆ. ನಿಪಿ- 45 ರಲ್ಲಿ ಕಾಣುವ ಮನೆ 32x32 ಅಡಿ ಅಳತೆ ಇರುತ್ತದೆ. ಸದರಿ ಮನೆ ಒಟ್ಟು ಕುಟುಂಬದ ಮನೆ ಎಂದರೆ ಸರಿ. ಸದರಿ ಮನೆಯನ್ನು ಪ್ರತಿವಾದಿ 9 ರವರು ನಿಡಿ -3 ರಂತೆ ಮಂಜುರಾತಿ

ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಿಡಿ- 4 ರಂತೆ ಪ್ರತಿವಾದಿ 9 ರ ಹೆಸರಿಗೆ ಈ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿ 9 ರವರಿಗೆ ಸದರಿ ಆಸ್ತಿಯನ್ನು ಮಂಜೂರು ಮಾಡಿಸಿಕೊಳ್ಳುವ ಅಧಿಕಾರ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತು 1 ರಿಂದ 3 ನ್ನು 8 ನೇ ಪ್ರತಿವಾದಿ ಮಾರುವ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತು 5 ಪಹಣಿಯಲ್ಲಿ ಸರ್ಕಾರ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿ ವಾದಿಯ ತಂದೆಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು ಗಳಲ್ಲಿ ವಾದಿಗೆ ಭಾಗ ಇರುತ್ತದೆ ಎಂದರೆ ಸರಿ.

ಪಾಟೀ ಸವಾಲು ಃ ಪ್ರತಿವಾದಿ 3 ಎ ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ 6 ರಿಂದ 10 ರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ